

ಊರವರ ಇಚ್ಛಾಶಕ್ತಿಯ ದ್ಯೋತಕ 'ಗ್ರಾಮ ಸೇತು'

ಮಂದಿಯ ತಂಡವು ಸಶಕ್ತವಾಯಿತು. ಸದಸ್ಯರ ಸಂಖ್ಯೆ ಏರಿತು. ಪ್ರತಿ ಮನೆಗಳ ಭೇಟಿ. ಮನೆಯವರೊಂದಿಗೆ ಮನೆಯವರಾಗಿ ಮಾತುಕತೆ. ಊರಿನ ಅವಶ್ಯಕತೆಗಳನ್ನು ಮನದಟ್ಟು ಮಾಡುವ ಕೆಲಸಗಳು ನಡೆದುವು. ಇದು ನಮಗೋಸ್ಕರ ಹೋರಾಟ, ನಮ್ಮ ಹಳ್ಳಿಯ ಉದ್ಧಾರಕ್ಕಾಗಿ ಆಂದೋಲನ. ರಾಜಕೀಯ ಲಾಭಕ್ಕಲ್ಲ – ಘೋಷಣೆಯು ಮನಸ್ಸುಗಳನ್ನು ಬಂಧಿಸಿದುವು.

ಅನೇಕರು ಕೂಲಿ ಕೆಲಸಗಳಿಗೆ ಹೋಗುವುದರಿಂದ ರಾತ್ರಿ ಸಮಯದಲ್ಲಿ ಸಭೆಗಳು ಜರುಗಿದುವು. ಕರೆಂಟ್ ಇಲ್ಲದಿದ್ದಾಗ ಮೊಬೈಲ್ ಲೈಟಿನ ಬೆಳಕಿನಲ್ಲಿ ಸಭೆಗಳಾದುವು. ಅಲ್ಲಿ ವಸ್ತುಸ್ಥಿತಿಯನ್ನು ಮನದಟ್ಟು ಮಾಡಲಾಯಿತು. ಈ ಮಧ್ಯೆ 'ಏನೋ ಗಿಮಿಕ್ ಮಾಡ್ತಾರೆ,' ಎಂದು ಹಂಗಿಸಿದರು. ವಾಟ್ಸ್‌ಆ್ಯಪ್‌ನಲ್ಲಿ ಸಂದೇಶಗಳು ಹರಿದಾಡಿದುವು. ಇವೆಲ್ಲಾ ತಂಡದ ಗಟ್ಟಿ ನಿರ್ಧಾರಗಳ ಮುಂದೆ ಮಂಕಾದುವು.

ಗ್ರಾಮ ಭಾರತದ ಹಳ್ಳಿ ದನಿಯು ತಾಲೂಕು ಅಲ್ಲ, ರಾಜ್ಯದಲ್ಲಿ ಸುದ್ದಿಯಾಯಿತು. ಹಳ್ಳಿಯ ಮೂಲ ಸೌಕರ್ಯಗಳಿಗೆ ಅಪೇಕ್ಷಿಸಿ ಹೋರಾಟ ಮಾಡಿದಾಗ 'ನಾಟಕ'ವೆಂದು ಕರೆದರು. 'ಚುನಾವಣೆಯ ಪೂರ್ವದಲ್ಲಿ ಗೇಲಿಯಾಡಿದ್ದು ಒಳಿತೇ ಆಯಿತು. ಇಲ್ಲದಿದ್ದರೆ ಗ್ರಾಮ ಭಾರತವನ್ನು ಸಶಕ್ತವಾಗಿ ಕಟ್ಟಲು ಸಾಧ್ಯವಾಗುತ್ತಿರಲಿಲ್ಲ. ನಿಜಕ್ಕೂ ಪ್ರತಿಭಟನೆಯ ಸಂಕೇತವಾಗಿ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂಬ ಉದ್ದೇಶ ಇತ್ತಷ್ಟೇ ವಿನಾ ಗೆಲ್ಲಬೇಕೆಂಬ ನಿರೀಕ್ಷೆಯಾಗಲೀ ಆಶಯವಾಗಲಿ ಇದ್ದಿರಲಿಲ್ಲ. ಆದರೆ ನಮ್ಮ ನಾಲ್ವರು ಅಭ್ಯರ್ಥಿಗಳು ವಿಜಯಿಯಾದರು. ಇದು ಹಳ್ಳಿಗೆ ಹಳ್ಳಿಗರೇ ತಂದಿತ್ತ ಮಾನ' ಎಂದು ಮಹೇಶ್ ಆ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ.

ಚುನಾವಣೆ ಅಂದಾಗ ನೀರಿನಂತೆ ಹಣ ಖರ್ಚು ಮಾಡಬೇಕು. ಹಿಂಬಾಲಕರನ್ನು ಸೇರಿಸಬೇಕು.



ನೆಟ್‌ವರ್ಕಿಗಾಗಿ ಒದ್ದಾಟ

ಹಳ್ಳಿ ಮನಸ್ಸುಗಳನ್ನು ಬೆಸೆಯುತ್ತಿರುವ ಮಹೇಶ್

